# ಬಂಡೀಪುರದಲ್ಲಿ ಬೇಸಿಗೆ ಸುಂದರಿ

**ನಸುಗೆಂಪು ಬಣ್ಣದ ಈ ಹೂವು ಪುಷ್ಪಲೋಕದ ಅಪ್ಸರೆಯೇ ಸರಿ. ಹಳದಿ ಕಕ್ಕೆ ಮರದ ಜಾತಿಗೆ ಸೇರಿದ ಈ ಜವನಿಕಾದಲ್ಲೂ ಸುಮಾರು ಐದು ಪ್ರಭೇದಗಳಿವೆ.**

ಚಿತ್ರ– ಬರಹ:
**ಆರ್.ಕೆ.ಮಧು**

ಹುಲಿ ಸಂರಕ್ಷಿತ ಪ್ರದೇಶ ಬಂಡೀಪುರದಲ್ಲಿ ಬಿಸಿಲಿನ ಧಗೆ ಜೋರಾಗಿದೆ. ಬಿಸಿಲಿನ ಹೊಡೆತಕ್ಕೆ ಬಳಲಿ ಬೆಂಡಾದ ಜನರ ಮತ್ತು ಪ್ರಾಣಿಗಳ ಮನತಣಿಸಲೋ ಎಂಬಂತೆ ಬೇಸಿಗೆ ಸುಂದರಿ ಕ್ಯಾಸಿಲಾ ಜವನಿಕಾ ನಸು ಕೆಂಪು ಹೂಗಳನ್ನು ಮೈತುಂಬ ಅರಳಿಸಿ ನರ್ತಿಸುತ್ತಿದ್ದಾಳೆ!

ಹೌದು, ಅರಣ್ಯಕ್ಕೆ ಬೇಸಿಗೆಯಲ್ಲೂ ತನ್ನದೇ ಆದ ಸೌಂದರ್ಯವಿದೆ. ಪ್ರಕೃತಿದೇವಿ ಋತುಮಾನಕ್ಕೆ ತಕ್ಕಂತೆ ಹೊಸ ರೂಪಗಳನ್ನು ತಳೆಯುತ್ತಾಳೆ. ಬಂಡೀಪುರದ ಕಾಡಿನ ತುಂಬ ಅಲ್ಲಲ್ಲಿ ಅರಳಿ ನಿಂತಿರುವ ಕ್ಯಾಸಿಲಾ ಜವನಿಕಾದ ಹೂಗಳು ಪ್ರಕೃತಿ ಪ್ರೇಮಿಗಳ ಮನ ತಣಿಸುತ್ತಿದೆ.

ನಸುಗೆಂಪು ಬಣ್ಣದ ಈ ಹೂವು ಪುಷ್ಪಲೋಕದ ಅಪ್ಸರೆಯೇ ಸರಿ. ಹಳದಿ ಕಕ್ಕೆ ಮರದ ಜಾತಿಗೆ ಸೇರಿದ ಈ ಜವನಿಕಾದಲ್ಲೂ ಸುಮಾರು ಐದು ಪ್ರಭೇದಗಳಿವೆ. ಬೇಸಿಗೆಯ ಸಮಯದಲ್ಲಿ ಮೈತುಂಬ ಹೂ ಅರಳಿಸಿಕೊಂಡು ಬೆಳೆಯುವ ಈ ಮರ ಫೆಬಸೀ ಸಸ್ಯಪ್ರಭೇದಕ್ಕೆ ಸೇರಿದ್ದು.

ಗುಲಾಬಿ, ದಟ್ಟ ಕೆಂಪು, ನಸುಗೆಂಪು, ಬಿಳಿ ಮತ್ತು ತೆಳುಗುಲಾಬಿ ವರ್ಣಗಳ ಹೂ ಬಿಡುವಂತಹ ಐದು ಬಗೆಯ ಮರಗಳಿವೆ. ಸುಮಾರು 25 ಮೀಟರ್ ಎತ್ತರ ಬೆಳೆವ ಈ ಮರ ಅಲಂಕಾರಿಕ ಗಿಡವೆಂದೂ ಹೆಸರುವಾಸಿಯಾಗಿದೆ. ಟೊಂಗೆಯ ಎರಡೂ ಬದಿಯಲಿ ಸರದಿಯಂತೆ ಇದರ ಹೂ ಬಿಡುತ್ತದೆ.

ಇದು ಕೇವಲ ಅಲಂಕಾರಿಕ ಗಿಡ ಮಾತ್ರವಲ್ಲ; ಆಯುರ್ವೇದ ಔಷಧಿಯಲ್ಲೂ ಇದರ ಹೂ, ಕಾಂಡ, ಎಲೆಗಳು ಬಳಕೆಯಾಗುತ್ತವೆ. ಇದರ ಹಣ್ಣುಗಳನ್ನು ತಿನ್ನಬಹುದಾದರೂ, ಇದರದೇ ಕೆಲವು ಪ್ರಭೇದದ ಗಿಡದ ಹಣ್ಣು ವಿಷಕಾರಿ.

ಬೀಜವನ್ನು ನೆಟ್ಟು ಇದರ ಗಿಡಗಳ ಬೆಳೆಸಬಹುದು. ನೀರು ದಿನಾ ಹಾಕಬೇಕಾದರೂ, ಹೆಚ್ಚು ನೀರು ಹಾಕಿದರೆ ಗಿಡ ಸಾಯುತ್ತದೆ. ಕ್ಯಾಸಿಲಾ ಜನವಿಕಾ ಉಷ್ಣವಲಯದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.





